

ಮೇಲೆಯೇ ಪಾರುಪತ್ಯ ನಡೆಸಿ ನಮ್ಮ ಉದ್ಯೋಗಗಳನ್ನು ಕಸಿದುಕೊಂಡು ಬಿಟ್ಟರೆ..!

ಅಮೆರಿಕ, ಬ್ರಿಟನ್‌ನಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಶೇ.31ರಷ್ಟು ಜನ ಈ ರೀತಿಯ ಭಯ ವ್ಯಕ್ತಪಡಿಸಿದ್ದಾರಂತೆ. ಸದ್ಯಕ್ಕಂತೂ ಅನಗತ್ಯ ಭಯಪಡಲು ಕಾರಣಗಳೆ ಇಲ್ಲ ಎಂದು ವಾಣಿಜ್ಯ ಉದ್ದೇಶದಿಂದ ರೊಬೋಟ್ ತಯಾರಿಕೆಗೆ ಇಳಿದಿರುವ ಕಂಪನಿಗಳು ಹೇಳಿದರೂ, ಭವಿಷ್ಯದಲ್ಲಿ ಭಸ್ಮಾಸುರನಾಗುವ ಭಯ ವಿಜ್ಞಾನಿಗಳಲ್ಲೂ ಮನೆ ಮಾಡಿದೆ. ಈ ಹಿಂದೆ ನಡೆದ ಕೆಲವು ಘಟನೆಗಳು ಇದಕ್ಕೆ ಪುಷ್ಟಿ ನೀಡುತ್ತವೆ. 2015ರಲ್ಲಿ ಜರ್ಮನಿಯ ಫೋಕ್ಸ್‌ವ್ಯಾಗನ್ ಕಾರ್ಖಾನೆಯಲ್ಲಿ ಸುಮ್ಮನೆ ನಿಂತಿದ್ದ ರೊಬೋಟ್ ಒಬ್ಬ ಕಾರ್ಮಿಕನನ್ನು ಹಿಡಿದು ಹೊಸಕಿ ಹಾಕಿತು. ಅಮೆರಿಕದಲ್ಲಿ 2016ರಲ್ಲಿ ಕೃತಕ ಬುದ್ಧಿಮತ್ತೆಯಿಂದ ರೂಪಿಸಿದ ಸ್ವಯಂಚಾಲಿತ ಕಾರು ಟ್ರ್ಯಾಕ್ಟರ್‌ಗೆ ಡಿಕ್ಕಿ ಹೊಡೆದು ಕಾರಿನಲ್ಲಿದ್ದ ವ್ಯಕ್ತಿ ಮೃತಪಟ್ಟ. ಡಲ್ಲಾಸ್‌ನ ಪೊಲೀಸರು ರೊಬೋಟ್ ಬಳಸಿ ಬಂದೂಕುಧಾರಿಯೊಬ್ಬನನ್ನು ಉಡಾಯಿಸಿದರು.

ರೊಬೋಟ್ ಮನುಷ್ಯನನ್ನು ಸಾಯಿಸಿದ ಇಂತಹ ಘಟನೆಗಳು ನಡೆದಾಗಲೆಲ್ಲ ಆರೋಪ ಹೊರಿಸುವುದು ಯಾರ ಮೇಲೆ ಎಂಬುದರ ಬಗ್ಗೆ ಚರ್ಚೆಗಳು ಹುಟ್ಟಿಕೊಳ್ಳುತ್ತವೆ. ಅಷ್ಟೇ ಬೇಗ ಇಂತಹ ಚರ್ಚೆ ಸತ್ತೂ ಹೋಗುತ್ತದೆ ಇನ್ನೊಂದು ದುರ್ಘಟನೆ ನಡೆಯುವವರೆಗೆ.

ಇಲ್ಲಿ ಒಂದು ಪ್ರಶ್ನೆ ಎದುರಾಗುತ್ತದೆ. ಮನುಷ್ಯರು ಅಪರಾಧ ಮಾಡಿದಾಗ ಅದನ್ನು ಬೇಧಿಸಲು ಅತ್ಯಂತ ಆಧುನಿಕ ತಂತ್ರಜ್ಞಾನ ಈಗ ಲಭ್ಯ. ಕೋರ್ಟ್‌ನಲ್ಲಿ ಪ್ರಕರಣ ವಿಚಾರಣೆ, ಮಾನವ ಹಕ್ಕು ಉಲ್ಲಂಘನೆಯಂತಹ ಪ್ರಕರಣಗಳು, ನಿರಪರಾಧಿಗೆ ಶಿಕ್ಷೆಯಾಗುವುದನ್ನು ತಡೆಯಲು ಇಂತಹ ತಂತ್ರಜ್ಞಾನದ ಬಳಕೆ ಸಹಾಯಕ್ಕೆ ಬರುತ್ತದೆ. ಆದರೆ ರೊಬೋಟ್‌ಗಳೇ ಅಪರಾಧಕ್ಕೆ ಇಳಿದರೆ...!

'ಟರ್ಮಿನೇಟರ್' ನಂತಹ ಸಿನಿಮಾ ನೆನಪಾಯಿತೇ? ಆಗ ವಿಶೇಷ ಕಾನೂನು ರೂಪಿಸಬೇಕಾಗುತ್ತದೆ. ಸದ್ಯ ಇಂತಹ ಕಾನೂನುಗಳು ಯಾವ ದೇಶದಲ್ಲೂ ಇಲ್ಲ. ಅಮೆರಿಕದಲ್ಲಿ ಟೆಸ್ಲಾ ಸ್ವಯಂಚಾಲಿತ ಕಾರು ಅಪಘಾತಕ್ಕೀಡಾಗಿ ವ್ಯಕ್ತಿ ಸತ್ತಾಗ ಕೃತಕ ಬುದ್ಧಿಮತ್ತೆಯನ್ನು ಆರೋಪಿಯನ್ನಾಗಿ ಮಾಡಿ, ಆ ಕಾರಿನ ಕಂಪನಿಯನ್ನು ದೋಷಮುಕ್ತಗೊಳಿಸಲಾಯಿತು. ಲಂಡನ್ನಿನಲ್ಲಿ ಇಬ್ಬರು ಕಲಾವಿದರು ರೂಪಿಸಿದ ರೊಬೋಟ್ ಆನ್‌ಲೈನ್‌ನಲ್ಲಿ ಮಾದಕ ದ್ರವ್ಯ ಖರೀದಿಸಿತು. ಅದನ್ನು ಬಂಧಿಸಿ ನಂತರ ಬಿಟ್ಟು ಬಿಟ್ಟರಂತೆ. ಆ ಇಬ್ಬರು ಕಲಾವಿದರು ತಪ್ಪಿಸಿಕೊಂಡರು.

## ಉದ್ಯೋಗಕ್ಕೂ ಸಂಚಕಾರ?

ಈಗ ಉದ್ಯೋಗ ಕ್ಷೇತ್ರಕ್ಕೆ ಬರೋಣ. ಬಟ್ಟೆ ಒಗೆಯುವುದು, ನೆಲ ಒರೆಸುವುದು, ಊಟ ತಯಾರಿಕೆ, ಕಾರು ಚಾಲನೆ, ಮಕ್ಕಳಿಗೆ ಪಾಠ ಹೇಳುವುದು, ಉಪಾಹಾರಗೃಹದಲ್ಲಿ, ಬಾರ್‌ಗಳಲ್ಲಿ ಊಟ–ತಿಂಡಿ, ಬಿಯರ್ ಗ್ರಾಹಕರಿಗೆ ಪೂರೈಸುವುದು.. ಇಂತಹ ಸಮಯವನ್ನು ಹಾಳು ಮಾಡುವ, ಮಾಮೂಲು ಕೆಲಸಗಳನ್ನೆಲ್ಲ ರೊಬೋಟ್‌ಗಳಿಗೆ ವಹಿಸಿ ನಾವು ಮನುಷ್ಯರು ಬಿಳಿ ಕಾಲರ್ ಉದ್ಯೋಗಗಳನ್ನು ಮಾಡೋಣ ಎಂದು ಲಘುವಾಗಿ ಮಾತನಾಡುವವರಿದ್ದಾರೆ.

ಇದಕ್ಕೆ ಪೂರಕವೆಂಬಂತೆ ಬ್ರಿಟನ್ನಿನಲ್ಲಿ 'ಪ್ರೈಸ್‌ವಾಟರ್‌ಹೌಸ್ ಕೂಪರ್' ನಡೆಸಿದ ಸಮೀಕ್ಷೆಯ ಪ್ರಕಾರ 2030ರ ಹೊತ್ತಿಗೆ ಅಲ್ಲಿ ಒಟ್ಟು ಉದ್ಯೋಗಕ್ಷೇತ್ರದಲ್ಲಿ ಮೂರನೇ ಒಂದು ಭಾಗದಷ್ಟು ಉದ್ಯೋಗಗಳು ರೊಬೋಟ್‌ಗಳ ನೇಮಕಾತಿಯಿಂದಾಗಿ ಮನುಷ್ಯನ ಕೈ ತಪ್ಪಲಿವೆಯಂತೆ. ಅಂದರೆ ಅಷ್ಟು ಉದ್ಯೋಗಗಳು ರೊಬೋಟ್ ಪಾಲಾಗಲಿವೆ.

ಇದಕ್ಕೆ ಸಮಜಾಯಿಸಿ ನೀಡುವವರೂ ಇದ್ದಾರೆ. ಹೆಚ್ಚು ಶ್ರಮ ಬೇಡುವ, ಅಪಾಯಕಾರಿ ಎನಿಸುವ ಕೆಲಸಗಳನ್ನು ಯಂತ್ರ ಮಾನವರು ಮಾಡಲಿದ್ದಾರೆ.